ಸದಸ್ಯರಿಂದಾಗಿ ಕಾದಂಬರಿ ಕೊಂಚ ರೋಚಕವಾಗುತ್ತದೆ. ಜೊತೆಗೆ ಇದು ಸೋಮ ಮತ್ತು ಅವನ ಹೆಂಡತಿ ಜಾಜಿ ಅವರ ಅನುರಾಗದ ಕಥನವೂ ಹೌದು. ಕೊನೆಯಲ್ಲಿ ಇದು ಕಾಡಿನ ಮಕ್ಕಳು ತಮ್ಮ ಕಾಡನ್ನು ಬಿಟ್ಟು ನಾಡನ್ನು ಸೇರಿಕೊಳ್ಳಬೇಕಾದ ದುರಂತವನ್ನು ತಣ್ಣಗೆ ಹೇಳುತ್ತದೆ.

ಆನೆಯಂತಹ ಮೂಕಜೀವಿಯನ್ನು ಆಧುನಿಕ ಕೆಲಸಗಳಿಗೆ ಪಳಗಿಸುವ ಕೆಲಸವನ್ನು ಕಾಡಿನ ಮಕ್ಕಳಿಂದ ಸರ್ಕಾರ ಮಾಡಿಸುತ್ತಲೇ ಇರುತ್ತದೆ. ಹಾಗೆ ಮಾಡುವುದರ ಮೂಲಕ ಎಲ್ಲ ಜೀವಿಗಳೂ ಇರುವುದು ನಗರಗಳ, ಅಲ್ಲಿನ ಜನರ ಉಪಯೋಗಕ್ಕಾಗಿ, ಸಂತೋಷಕ್ಕಾಗಿ ಎಂಬುದನ್ನು ಕಾದಂಬರಿ ಸೂಚಿಸುತ್ತಿರುವಂತಿದೆ. ಇದರ ದುರಂತದ ಮುಖ ಏನೆಂದರೆ ಹಾಗೆ ಉಪಯೋಗಿಸಲ್ಪಟ್ಟವರೇ ಮುಂದೊಂದು ದಿನ ಹೊರಗೆಸೆಯಲ್ಪಡುತ್ತಾರೆ.

ತಮಾಷೆಯ ಪದರವೊಂದು ಇಲ್ಲ ಎನ್ನುವುದನ್ನು ಬಿಟ್ಟರೆ ಕಾದಂಬರಿಯ ಸ್ವರೂಪ ಪೂರ್ಣಚಂದ್ರ ತೇಜಸ್ವಿ ಅವರ ಬರವಣಿಗೆಯ ಮಾದರಿಯದು. ತೇಜಸ್ವಿಯವರ ಕಥನಕ್ಕೆ ಪರಿಸರದ ಕುರಿತ ಗಟ್ಟಿಯಾದ ವೈಜ್ಞಾನಿಕ ನೆಲೆ ಇದ್ದರೆ ಬೋರಲಿಂಗಯ್ಯ ಅವರ ಬರಹ ಪರಿಸರದ ಮೇಲಿನ ಮಾನವ ದಾಳಿಯನ್ನು ವರ್ತಮಾನದ ನೆಲೆಯಲ್ಲಿ ಶೋಧಿಸಿ ಅಭಿವ್ಯಕ್ತಿಸುತ್ತದೆ. ಮತ್ತು ಆನೆಗಳ ಕುರಿತಾದ ಅಪೂರ್ವ ವಿವರಗಳಿಂದಲೂ ಕೂಡಿದೆ.

ಹೊರಗಿನಿಂದ ನೋಡಿದಾಗ ಕಣ್ಣಿಗೆ ಹಸಿರಾಗಿ ಕಾಣುವ ಕಾಡಿನ ಒಳಗೆ ಯಾವ ಬಗೆಯ ಕೋಲಾಹಲ ನಡೆದಿರುತ್ತದೆ ಎಂಬುದರ ವಿವರಣೆಗೆ ಕಾದಂಬರಿ ಸೀಮಿತವಾಗಿಲ್ಲ. ಒಂದೆಡೆ ಅದು ನಮ್ಮ ಆಧುನಿಕ ಜಗತ್ತಿನ ಪ್ರಗತಿಯ ಕಲ್ಪನೆಯ ಬಗ್ಗೆ ದಾಖಲಿಸುತ್ತಲೇ, ನಾಡು ಹೇಗೆ ಕಾಡಿನ ಮೇಲೆ ಒತ್ತಡ ಹಾಕುತ್ತದೆ ಎಂಬುದನ್ನೂ ನಿರೂಪಿಸುತ್ತದೆ. ಕಾಡಿನ ಪರಂಪರಾಗತ ಜ್ಞಾನದ ಬಗ್ಗೆ, ಕಾಡಿನ ಮಕ್ಕಳ ಹಕ್ಕು–ಹೋರಾಟದ ಬಗ್ಗೆಯೂ ಕಾದಂಬರಿ ಮಾತನಾಡುತ್ತದೆ. ಅದಕ್ಕೂ ಮಿಗಿಲಾಗಿ ಅಧಿಕಾರಶಾಹಿಯ ಬಗೆಗೂ ಕಟು ಚಿತ್ರಣ ಕೊಡುತ್ತದೆ. ಜೊತೆಗೆ ಹೊರಜಗತ್ತು ತೀರ್ಮಾನಿಸಿದ ನಿಯಮಗಳ ಅಡಿಗೇ ಕಾಡಿನ ಮಕ್ಕಳನ್ನು ತರುವ ವಾಸ್ತವವನ್ನು ಕಾದಂಬರಿ ದಾಖಲಿಸುತ್ತದೆ. ಈ ಕಾಡಿನ ಮಕ್ಕಳು ತಮ್ಮದಲ್ಲದ ಯುದ್ಧದಲ್ಲಿ ಬೀದಿಗೆ ಬಂದವರು; ಮತ್ತು ಬರುತ್ತಲೇ ಇರುವವರು. ನಮ್ಮೆಲ್ಲರ ಹಾಗೆಯೇ ಅವರ ಹಣೆಬರಹವನ್ನು ಅವರಿಗೆ ಸಂಬಂಧಪಡದ ಬೇರೆ ಯಾರೋ ಬರೆಯುತ್ತಿದ್ದಾರೆ. ಹಾಗಾಗಿ ಇದು ಹಲವು ನೋವಿನ ಎಳೆಗಳ ನೇಯ್ಗೆಯ ಬಟ್ಟೆಯಾಗಿ ಹೆಣೆದುಕೊಂಡಿದೆ. ಮತ್ತು ಅದು ಅತ್ಯಂತ ಸೂಕ್ಷ್ಮವಾಗಿ, ಹದವರಿತ ಬರವಣಿಗೆಯಾಗಿ ಬಂದಿದೆ.

ಕಾದಂಬರಿಯನ್ನು ಕಾಡಿನ ಜೀವಿಗಳ ಆಧುನಿಕತೆಯೊಂದಿಗಿನ ಸಂಘರ್ಷದ ಚಿತ್ರಣ ಎಂಬ ತೀರ ಸರಳ ಸಮೀಕರಣದಲ್ಲಿ ನೋಡಲಾಗದು. ಇದಕ್ಕೆ ಹಲವಾರು ಮುಖಗಳಿವೆ. ಇಂತಹ ಸಮಸ್ಯೆ ವಿಶ್ವದಾದ್ಯಂತ ಇದೆ. ಆದ್ದರಿಂದಲೇ ಇದಕ್ಕೊಂದು ಸಮಕಾಲೀನ ಮತ್ತು ಸದ್ಯದ ಗುಣ ಬಂದಿದೆ. ಕಾದಂಬರಿಕಾರರು ಮಾಹಿತಿ+ಕಥನವನ್ನು ಬೆರಕೆ ಮಾಡಿದ ಕಥನವನ್ನು ಕೊಟ್ಟಿದ್ದಾರೆ. ಈ ಬಗೆಯ ಕಾದಂಬರಿಗಳು ಬಹುಶಃ ಕನ್ನಡದಲ್ಲಿ ಬಹಳಿಲ್ಲ. ಇದ್ದರೂ ಈ ಬಗೆಯ ದೊಡ್ಡ ಹರಹಿನ, ಭಿನ್ನ ಕಾಳಜಿಯ ವಸ್ತುವನ್ನು ನಿರ್ವಹಿಸಿದ ಕಾದಂಬರಿಗಳು ಇಲ್ಲ ಎನ್ನಬಹುದು.

ಈ ಸರಳ ನಿರೂಪಣೆಯ ವಾಸ್ತವವಾದೀ ಕಾದಂಬರಿ ಜೇನುಕುರುಬ ಕುಟುಂಬವೊಂದರ ಕಥೆಯನ್ನು ಹೇಳಲು ಹೋಗಿ ಹತ್ತಾರು ಸಂಗತಿಗಳ ಸುತ್ತ ಹೆಣೆದುಕೊಂಡಿದೆ; ತನ್ನ ತೆಕ್ಕೆಯಲ್ಲಿ ಹಲವು ವಿಷಯಗಳನ್ನು ಇಟ್ಟುಕೊಂಡು ತಕ್ಕ ಸಮಯದಲ್ಲಿ ಮಾತನಾಡುತ್ತದೆ. ಅದು ಹಲವು ವಿಷಯ, ಸಮಸ್ಯೆಗಳ ಕುರಿತಂತೆ ಎತ್ತುವ ಪ್ರಶ್ನೆಗಳಿಗೆ ಎಲ್ಲರೂ ಒಪ್ಪುವಂತಹ ಪರಿಹಾರಗಳಿಲ್ಲ. ಆದರೆ, ಅವುಗಳ ಅಗಾಧ ಸ್ವರೂಪವನ್ನು ಓದುಗರಿಗೆ ದರ್ಶಿಸುವ ಕೆಲಸವನ್ನಂತೂ ಈ ಕಾದಂಬರಿ ಪ್ರಭಾವಶಾಲಿಯಾಗಿ ಮಾಡುತ್ತದೆ ಎಂದು ನಿಸ್ಸಂದೇಹವಾಗಿ ಹೇಳಬಹುದು.